ಶ್ರೀ ಮಲ್ಲಿಕಾರ್ಜುನ ಎಂ ಖರ್ಗೆ :– ಅವರು ಹೇಳುವುದರಲ್ಲಿ ಅರ್ಥವಿದೆ. ಹಿಂದೆ ಆಕಸ್ಮಾತಾಗಿ ಸ್ಟೆಫೆಂಡರಿ ಗ್ರಾಜುಯೇಟ್ ಆದ ಹಿಂದಿ ಮತ್ತು ಮರಾಠಿ ಬರುವ ಟೀಚರ್ ಅನ್ನು ಡಿಡಿಪಿಐ ಅವರು ಹಾಕಿಬಿಟ್ಟಿದ್ದರು. ಈಗಾಗಲೇ ಅದನ್ನು ಬದಲಾಯಿಸಿದ್ದು ಪದ್ಮನಾಭಾಚಾರ್ಯ ಎಂಬ ಕನ್ನಡದವರನ್ನು ನೇಮಕ ಕೊಟ್ಟಿದ್ದೇವೆ. ಆದ್ದರಿಂದ ಈ ಪ್ರಶ್ನೆ ಈಗ ಉದ್ಭವಿಸುವುದಿಲ್ಲ.

ಶ್ರೀ ಕೆ. ಸೋಮಪ್ಪ ಸುವರ್ಣ :– ವಂದನೆಗಳು.

ರಾಜ್ಯದ ನೀರಿನ ಪಾಲನ್ನು ಬಳಸಿಕೊಳ್ಳುವುದು

390 ಶ್ರೀ ಜಿ ರಾಜುಗೌಡ (ಹನೂರು):– ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೃಷ್ಣಾ ನದಿ ನೀರಿನ ರಾಜ್ಯದ ಪಾಲನ್ನು ಸಂಪೂರ್ಣವಾಗಿ ಬಳಸಿ ಕೊಳ್ಳಬೇಕಾದರೆ ಕೃಷ್ಣಾ ನದಿ ಪಾತ್ರದ ಯೋಜನೆಗಳನ್ನು 2000ನೇ ಇಸವಿ ಅವದಿಯೊಳಗೆ ಪೂರ್ಣಗೊಳಿಸಲು ಪ್ರತಿ ವರ್ಷ (1ಕ್ಕೆ) ಕನಿಷ್ಟ ಎಷ್ಟು ರೂಪಾಯಿಗಳನ್ನು ಖರ್ಚು ಮಾಡಬೇಕಾಗುತ್ತದೆ?

ಆ) ಹಾಗಿದ್ದಲ್ಲಿ ಇದುವರೆಗೆ ಉಪಯೋಗಿಸಿಕೊಂಡಿರುವ ನೀರಿನ ಪ್ರಮಾಣವೆಷ್ಟು? ಹಾಗೂ ಇನ್ನು ಎಷ್ಟು ನೀರನ್ನು ಉಪಯೋಗಿಸಿಕೊಳ್ಳಬೇಕಾಗಿದೆ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು)

ಅ) ಕೃಷ್ಣಾ ನದಿ ಪಾತ್ರದಲ್ಲಿ ಬರುವ ಯೋಜನೆಗಳನ್ನು 2000ನೇ ಇಸವಿ ಅವಧಿಯೊಳಗೆ ಪೂರ್ಣಗೊಳಿಸಲು ಈಗಿನ ಅಂದಾಜು ಪ್ರಕಾರ ಸುಮಾರು 3000 ಕೋಟಿ ರೂಪಾಯಿಗಳು ಬೇಕಾಗುವುದು. ಪ್ರತಿವರ್ಷ ಸರಾಸರಿ 300 ರಿಂದ 600 ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕಾಗುತ್ತದೆ.

ಆ) ಈಗ ಮುಗಿಸಿರುವ ಮತ್ತು ಭಾಗಶಃ ಕಾರ್ಯರೂಪದಲ್ಲಿರುವ ಯೋಜನೆಗಳಿಂದ ಪ್ರತಿ ಜಲವರ್ಷದಲ್ಲಿ ಸುಮಾರು 472 ಟಿ.ಎಂ.ಸಿ. ನೀರನ್ನು ಉಪಯೋಗಿಸಬಹುದು. ಉಳಿದ 264 ಟಿ.ಎಂ.ಸಿ. ನೀರಿನ ಉಪಯೋಗವನ್ನು ಪ್ರಗತಿಯಲ್ಲಿರುವ ಹಾಗೂ ಹೊಸ ಯೋಜನೆಗಳಿಂದ ಮಾಡಬೇಕಾಗಿದೆ.

ಶ್ರೀ ಜಿ ರಾಜುಗೌಡ :– ಸ್ವಾಮಿ ಈ ಬಚಾವತ್ ತೀರ್ಪಿನ ಪ್ರಕಾರ ನಮ್ಮ ರಾಜ್ಯಕ್ಕೆ ಕೃಷ್ಣೆಯಲ್ಲಿ ಎಷ್ಟು ಪಾಲು ಸಿಕ್ಕಿದೆ; ಈ 472 ಟಿ.ಎಂ.ಸಿ. ನೀರನ್ನು ಎಷ್ಟು ವರ್ಷದಿಂದ ಬಳಸಿಕೊಂಡಿದ್ದೀರಿ? ಉಳಿದ ನೀರನ್ನು ಎಷ್ಟು ವರ್ಷಗಳಲ್ಲಿ ಬಳಸಿಕೊಳ್ಳಬೇಕಾಗಿದೆ?

ಶ್ರೀ ಎಸ್. ಬಂಗಾರಪ್ಪ :– ಅಧ್ಯಕ್ಷರೇ, ಬಚಾವತ್ ತೀರ್ಪಿನ ಪ್ರಕಾರ ನಮ್ಮ ರಾಜ್ಯಕ್ಕೆ 734 ಟಿಎಂಸಿ ಸಿಕ್ಕಿದೆ. ಅದರಲ್ಲಿ ನಾವು ಈವರೆಗೆ ಉಪಯೋಗಿಸಿರುವುದು ಅನ್‌ಗೋಯಿಂಗ್ ಪ್ರಾಜೆಟ್‌ಗಳು ಮತ್ತು ಮುಗಿದಿರುವುದು ಎಲ್ಲಾ ಸೇರಿಸಿ 472 ಟಿಎಂಸಿ. ನಮಗೆ ಬ್ಯಾಲೆನ್ಸ್ ಉಳಿದಿರುವುದು 262 ಟಿಎಂಸಿ.

ಶ್ರೀ ಜಿ ರಾಜುಗೌಡ:– ಈ 262 ಟಿಎಂಸಿ ನೀರನ್ನು ನಾವು ಇನ್ನೂ ಉಪಯೋಗಿಸಿಕೊಂಡಿಲ್ಲ ಎಂಬುದೇ ಇಲ್ಲಿರುವ ಪ್ರಶ್ನೆ ಈ ನೀರನ್ನು 2000 ಇಸವಿವರೆಗೆ ಕಾಯದೆ ಅನುಪಯುಕ್ತ ಕಾರ್ಯಗಳನ್ನು ನಿಲ್ಲಿಸಿ 1995ರ ಹೊತ್ತಿಗೆ ಈ ನೀರನ್ನು ಸಹ ಉಪಯೋಗಿಸಿಕೊಳ್ಳಲು ಗಮನ ಕೊಡುತ್ತೀರಾ?

ಶ್ರೀ ಎಸ್. ಬಂಗಾರಪ್ಪ :– ಮಾನ್ಯ ಸದಸ್ಯರ ಒತ್ತಡವನ್ನು ನಾನು ಅರ್ಥಮಾಡಿಕೊಳ್ಳುತ್ತೇನೆ. ಏಕೆಂದರೆ ಪ್ರಪಂಚ ಬ್ಯಾಂಕಿನ ನೆರವಿನಿಂದ ಈ ಒಂದು ಕಾರ್ಯ ಪೂರ್ಣಗೊಳಿಸಬೇಕಾಗಿದೆ. ಈ ಶತಮಾನದ ಅಂತ್ಯದೊಳಗೆ ಕೃಷ್ಣಮೇಲ್ದಂಡೆ ಯೋಜನೆಗಳನ್ನು ಮುಗಿಸುವ ಗುರಿ ಇದೆ. ಆದಕ್ಕೆ ಹಲವಾರು ಕಾರಣಗಳಿಂದ ತಡವಾಗಿದೆ. ಈ ಬಗ್ಗೆ ಅನೇಕ ಸಲ ಇಲ್ಲಿ ಚರ್ಚೆ ಮಾಡಿದ್ದೇವೆ. ಹಣಕಾಸಿನ ತೊಂದರೆ ಮತ್ತು ಇತರೇ ಬೇರೆ ಬೇರೆ ಕಾರಣಗಳಿಂದ ಈ ಕೆಲಸ ತಡವಾಗಿ ಯೋಜನಾವೆಚ್ಚ ಸಹ ಹೆಚ್ಚಿದೆ. ಈಗ ಉಳಿದಿರತಕ್ಕ 262 ಟಿ.ಎಂ.ಸಿ. ನೀರು ಏನಿದೆ, ಅದನ್ನು

ನಾವು ಉಪಯೋಗ ಮಾಡಿಕೊಳ್ಳಬೇಕೆಂದರೆ, ಇದಕ್ಕೆ ಆದಷ್ಟು ಶೀಘ್ರವಾಗಿ ಹಣವನ್ನು ಒದಗಿಸಬೇಕು. ಮತ್ತು ಕಾರ್ಯಕ್ರಮವನ್ನು ತ್ವರಿತಗತಿಯಲ್ಲಿ ಮಾಡುವಂತಹ ಕೆಲಸವನ್ನು ಮಾಡಬೇಕು. ಇವೆಲ್ಲವನ್ನೂ ಮುಗಿಸಬೇಕಾದರೆ ನನ್ನ ಪ್ರಕಾರ ಹಣ ಎಷ್ಟು ಬೇಕಾಗುತ್ತದೆ ಅಂದರೆ, ಸಣ್ಣ ನೀರಾವರಿ ಯೋಜನೆಗಳಿಗೆ ಸುಮಾರು 250 ಕೋಟಿ ರೂಪಾಯಿಗಳು ಬೇಕಾಗುತ್ತದೆ. Upto the end of March 1990, we have spent Rs. 1,150 crores, Based on the present estimates, the total estimated cost for Krishna Basin comes to Rs. 3900 crores. We totally now required to spend Rs. 2750 crores, ಮತ್ತೆ ಸಣ್ಣ ನೀರಾವರಿ ಲಿಫ್ಟ್ ಇರಿಗೇಷನ್ ಇದನ್ನೆಲ್ಲಾ ಲೆಕ್ಕ ಹಾಕಿದರೆ 250 ಕೋಟಿ ರೂಪಾಯಿಗಳು ಬೇಕಾಗುತ್ತದೆ. ಇವೆಲ್ಲವನ್ನು ಸೇರಿಸಿ ಕೊಂಡರೆ ಸುಮಾರು 3000 ಕೋಟಿ ರೂಪಾಯಿ ಬೇಕಾಗುತ್ತದೆ. ನಾವು ಪ್ರತಿ ವರ್ಷ 300 ರಿಂದ 600 ಕೋಟಿಗಳನ್ನು ಖರ್ಚು ಮಾಡಿದ್ದೇ ಆದರೆ, If we do this, we can finish the project by the end of this century. ಸರ್ಕಾರ ಇದರ ಬಗ್ಗೆ ತೀವ್ರವಾದಂತಹ ಕಾರ್ಯಕ್ರಮ ಹಾಕಿಕೊಂಡಿದೆ. ಆದಷ್ಟೂ ಕಾಲಕ್ಕೆ ಸರಿಯಾಗಿ ಯೋಜನೆಯನ್ನು ಮುಗಿಸಬೇಕು. ನಮ್ಮ ಪಾಲಿನ ನೀರನ್ನು ನಾವು ಸಂಪೂರ್ಣ ಬಳಕೆ ಮಾಡಬೇಕೆಂಬ ಉದ್ದೇಶವನ್ನು ಕೂಡ ನಾವು ಇಟ್ಟುಕೊಂಡಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ :– ಇದರ ಬಗ್ಗೆ ಮೂರು ತಿಂಗಳ ಹಿಂದೆ ಮೂರು ರಾಜ್ಯದ ಮುಖ್ಯಮಂತ್ರಿಗಳ ಸಭೆ ನಡೆಯಿತು. ಮತ್ತೆ ಒಂದು ಸಭೆಯನ್ನು ಮಹಾರಾಷ್ಟ್ರದಲ್ಲಿ ಸೇರಬೇಕೆಂದು ತೀರ್ಮಾನವಾಗಿತ್ತು. ಮತ್ತೆ ಯಾವತ್ತು ಸೇರುತ್ತೀರಿ ಅನ್ನುವುದು ಏನಾದರೂ ನಿರ್ಧಾರವಾಗಿದೆಯೇ, ನಿರ್ಧಾರವಾಗಿದ್ದರೆ ಯಾವಾಗ ಸೇರುವುದು, ಎಲ್ಲಿ ಸೇರಬೇಕೆಂದು, ನಿರ್ಧಾರ ಮಾಡಿದ್ದೀರಿ, ರಾಜೀ ಸೂತ್ರದಿಂದ ಒಂದು ತೀರ್ಮಾನ ಮಾಡಿಕೊಳ್ಳಬೇಕೆಂದು ಹೇಳಿ ಸರ್ಕಾರದ ನಿರ್ಧಾರ ಇದೆ. ಈ ಬಗ್ಗೆ ನೀವು ಏನು ನಿರ್ಧಾರ ಕೈಗೊಂಡಿದ್ದೀರಿ, ಯಾವತ್ತು ಮತ್ತೆ ಮೂರು ರಾಜ್ಯದ ಮುಖ್ಯಮಂತ್ರಿಗಳು ಸೇರುತ್ತೀರೆಂಬುದನ್ನು ತಿಳಿಸಬೇಕು.

ಶ್ರೀ ಎಸ್. ಬಂಗಾರಪ್ಪ :– ಮಾನ್ಯ ಅಧ್ಯಕ್ಷರೆ, ನಮ್ಮ ಹಿಂದಿನ ಮುಖ್ಯಮಂತ್ರಿಯಾಗಿದ್ದ ಶ್ರೀ ವೀರೇಂದ್ರ ಪಾಟೀಲರ ಸರ್ಕಾರ ಇದ್ದಾಗ ಅವರು ಮಾತುಕತೆಯನ್ನು ಮಾಡಿದ್ದರು. ಇದಕ್ಕೆ ಮಹಾರಾಷ್ಟ್ರದ ಮುಖ್ಯಮಂತ್ರಿಗಳು, ಆಂಧ್ರದ ಮುಖ್ಯ ಮಂತ್ರಿಗಳು, ಹಾಗೂ ತಮಿಳು ನಾಡಿನಲ್ಲಿ ಕುಡಿಯುವ ನೀರಿನ ಸಮಸ್ಯೆ ಇರುವುದರಿಂದ ತಮಿಳುನಾಡಿನ ಮುಖ್ಯಮಂತ್ರಿಗಳು ಸೇರಿ ಮಾತುಕತೆಯನ್ನು ಮಾಡಿದ್ದರು. ಈಗ ಅವರಿಂದ ಮೊನ್ನೆ ತಾನೆ ಒಂದು ಅನುಕೂಲವಾದ ತಾರೀಖಿನ ದಿನ ಸಭೆ ಸೇರಬೇಕೆಂದು ಪತ್ರ ಬಂದಿದೆ. ಅದಕ್ಕೆ ನಾನೂ ಕೂಡ ಒಪ್ಪಿಗೆ ಕೊಟ್ಟಿದ್ದೇನೆ. ಆಂಧ್ರದ ಮುಖ್ಯಮಂತ್ರಿಯಾದ ಚೆನ್ನಾರೆಡ್ಡಿಯವರು ಸಹ ಒಪ್ಪಿಗೆ ಕೊಟ್ಟಿದ್ದಾರೆ. ಶರದ್‌ಪವಾರ್ ರವರೇ ಪತ್ರ ಬರೆದಿದ್ದಾರೆ. ಜನವರಿ 19 ಮತ್ತು 20ನೇ ತಾರೀಖು ಮಹಾರಾಷ್ಟ್ರದ ಮಹಾಬಲೇಶ್ವರ ಎಂಬಲ್ಲಿ ಸೇರುತ್ತೇವೆ. ಈ ಜಾಗವನ್ನು ವೀರೇಂದ್ರ ಪಾಟೀಲರ ಸರ್ಕಾರ ಇದ್ದಾಗಲೇ ಗೊತ್ತು ಮಾಡಿದ್ದರು. ಆಗ ತಾರೀಖು ನಿಗದಿ ಮಾಡಿರಲಿಲ್ಲ. ಈಗ ನಾವು ಜನವರಿ 19–20 ಕ್ಕೆ ಮಾತುಕತೆಗೆ ನಾವು ಸೇರುತ್ತಿದ್ದೇವೆ.

ಪ್ರೊ: ಎಂ.ಡಿ. ನಂಜುಂಡಸ್ವಾಮಿ :– ಮಾನ್ಯ ಅಧ್ಯಕ್ಷರೆ, ಬಚಾವತ್ ತೀರ್ಪಿನಲ್ಲಿ ಅತ್ಯಂತ ಅವೈಜ್ಞಾನಿಕವಾದ ಒಂದು ಅಂಶವೆಂದರೆ, ಈ ಗಡುವನ್ನು ನಿಗಧಿ ಮಾಡಿರುವುದು. 2000ದ ಇಸವಿಯೊಳಗೆ ಈ ಕೆಲಸವನ್ನು ನಾವು ಮುಗಿಸಬೇಕು. ಯಾವುದೇ ಒಂದು ಯೋಜನೆಯನ್ನು ಮುಗಿಸುವುದು ಕೇವಲ ಕಾನೂನು ಕಲಿತವರಿಗೆ ಒಂದು ಮ್ಯಾಟಿನಿ ಶೋ ಆಗಿ ಕಾಣಬಹುದು. ಆದರೆ ವಸ್ತು ಸ್ಥಿತಿ ಏನಿದೆ ಅಂದರೆ, ಉದಾಹರಣೆಗೆ ಕಳೆದ 6 ವರ್ಷ ರಾಜ್ಯದಲ್ಲಿ ಯಾವುದೋ ಒಂದು ಪಕ್ಷದ ಸರ್ಕಾರ ಇದ್ದು, ಕೇಂದ್ರದಲ್ಲಿ ಯಾವುದೋ ಒಂದು ಪಕ್ಷದ ಸರ್ಕಾರ ಇದ್ದು, ಆನಂತರ ರಾಜ್ಯದಲ್ಲಿ ಬೇರೆ ಒಂದು ಪಕ್ಷದ ಸರ್ಕಾರ, ಕೇಂದ್ರದಲ್ಲಿ ಮತ್ತೆ ಯಾವುದೋ ಬೇರೆ ಪಕ್ಷದ ಸರ್ಕಾರ ಇವು ನಮ್ಮ ಪ್ಲಾನಿಂಗ್ ಕಮಿಷನ್ ಅಂತ ಏನು ಕರೆಯುತ್ತೇವೆ ಮತ್ತೇ ಫೈನಾನ್ಸ್ ಕಮಿಷನ್ ಅಂತ ಏನು ಕರೆಯುತ್ತೇವೆ, ಅವುಗಳ ಮೇಲೆ ಇದು ಪ್ರಭಾವ ಬೀರುವಂತಹ ಅಂಶಗಳಾಗಿದೆ. ಹಣಕಾಸಿನ ತೊಂದರೆಯಿಂದಾಗಿ ಅಲ್ಲಿಯ ಕೆಲಸ ನಿಧಾನವಾಗಿದೆ. ಮತ್ತೆ ಭ್ರಷ್ಟಾಚಾರದ ಕಾರಣದಿಂದಾಗಿ ಅಲ್ಲಿಯ ಕೆಲಸ ನಿಧಾನವಾಗಿದೆ; ನಮ್ಮ ಕೃಷ್ಣಾ ಯೋಜನೆ ತಡವಾಗುವುದಕ್ಕೆ ಇರುವ ಮುಖ್ಯ ಕಾರಣಗಳೆಂದರೆ ಹಣಕಾಸಿನ ಕೊರತೆ ಹಾಗೂ ಭ್ರಷ್ಟಾಚಾರದ ಹಾವಳಿ. ಇವೆಲ್ಲವನ್ನೂ ದೃಷ್ಟಿಯಲ್ಲಿಟ್ಟುಕೊಂಡು ನೋಡಿದರೆ, ಈ ಯೋಜನೆಗೆ 3000

ಕೋಟಿ ರೂಪಾಯಿಗಳನ್ನು ಒದಗಿಸುವುದು ಸಾಧ್ಯವಾಗದೇ ಇರುವ ವಿಚಾರ. ಈ ಯೋಜನೆಯನ್ನು ಜಾರಿಗೆ ತರಲು ಕೊಟ್ಟಿರುವ ಗಡುವು 2000 ಎ.ಡಿ. ಏನಿದೆ, ಇದು ಅತ್ಯಂತ ಅನಿವಾರ್ಯವಾದ ಅಂಶವೆಂದು ಮತ್ತು ಇದನ್ನು ಕರ್ನಾಟಕ ಸರ್ಕಾರ ಒಪ್ಪುವುದಿಲ್ಲವೆಂಬ ಹೇಳಿಕೆಯನ್ನು ಈಗಿನಿಂದಲೇ ಕೊಡುವುದಾದರೆ, ನಮ್ಮ ನೀರಿನ ಪಾಲನ್ನು ನಾವು ಉಳಿಸಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆಂದು ನಾನು ಈ ಸರ್ಕಾರಕ್ಕೆ ಸಲಹೆ ಮಾಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ :– ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಶ್ರೀ.ಎ: ನಂಜುಂಡಸ್ವಾಮಿಯವರ ಪ್ರಶ್ನೆಯ ಎರಡನೆಯ ಭಾಗ ಏನಿದೆ, ಅದನ್ನು ನಿಜವಾಗಿಯೂ ಪರಿಶೀಲನೆ ಮಾಡುವುದಕ್ಕೆ ಯೋಗ್ಯವಾಗಿರುವಂಥ ವಿಚಾರ ಆಗಿದೆ. ಕಾಲದ ಮಿತಿಯ ಬಗ್ಗೆ ಎಷ್ಟೇ ತಜ್ಞರಿದ್ದರೂ ಕೂಡ, ಯುಟಿಲೈಸೇಷನ್ ಆಫ್ ವಾಟರ್; ಈ ವಿಚಾರದಲ್ಲಿ ಯಾವುದೇ ಸರ್ಕಾರ ಇದ್ದರೂ ಕೂಡ ಕಾಲದ ಮಿತಿಯೊಳಗೆ ಮಾಡಿಮುಗಿಸಲು ಕಷ್ಟವಾಗುತ್ತದೆ. ಇಂಥ ಯೋಜನೆಗಳ ವಿಚಾರದಲ್ಲಿ ಕಾಲ ಸ್ವಲ್ಪ ಜಾಸ್ತಿ ಬೇಕಾಗುತ್ತದೆ. ಕಾಲ ನಿಗದಿಯೊಗಿದೆ ಎನ್ನುವ ಒಂದು ಕಾರಣದಿಂದ ಈ ಕೆಲಸವನ್ನು ಸ್ಪೀಡಪ್ ಮಾಡಲೇ ಬೇಕಾಗುತ್ತದೆ. ಆದರೆ ಹಣಕಾಸಿನ ಪರಿಸ್ಥಿತಿಯ ಹಿನ್ನೆಲೆಯಲ್ಲಿ 300 ಕೋಟಿ ರೂಪಾಯಿಗಳಿಂದ 600 ಕೋಟಿ ರೂಪಾಯಿಗಳನ್ನು ವಾರ್ಷಿಕ ಪ್ಲಾನ್ ಔಟ್‌ಲೇನಲ್ಲಿ ಒದಗಿಸುವುದು ಸಣ್ಣ ವಿಚಾರವಲ್ಲ. ಆದರೂ ಕೂಡ ಈಗ ನಾವು ಪ್ರಪಂಚ ಬ್ಯಾಂಕ್‌ನವರೊಡನೆ ವ್ಯವಹರಿಸಿ, ಹಣಕಾಸನ್ನು ಈ ಯೋಜನೆಗೆ ಆದಷ್ಟು ತೆಗೆದುಕೊಂಡು, ಕಡಿಮೆ ಬಿದ್ದರೆ ಅದಕ್ಕೆ ಹೆಣಮನ್ನು ಒದಗಿಸಿಕೊಂಡು ಈ ಕೆಲಸವನ್ನು ಸ್ಪೀಡಪ್ ಮಾಡಲೇಬೇಕೆಂದು ನಾವು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಈ ಕೆಲಸವನ್ನು 2000 ಎ.ಡಿ.ಯೊಳಗೆ ಮಾಡಬೇಕೆಂದು ಅವಧಿ ಏನಿದೆ ಅದು ನಿಜವಾಗಿಯೂ ಯೋಜನೆಗೀಡು ಮಾಡುವಂಥ ವಿಚಾರವೆಂದು ಹೇಳುತ್ತೇನೆ. ಹಾಗೂ ಈ ಯೋಜನೆಯನ್ನು ಆದಷ್ಟು ಸ್ಪೀಡಪ್ ಮಾಡುವುದೊಂದೇ ನಮ್ಮಗಿರುವ ದಾರಿ ಎಂದು ಈ ಸಂದರ್ಭದಲ್ಲಿ ಹೇಳಲಿಚ್ಛಿಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ :– ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಗಳು ಯಾವ ಹಿನ್ನೆಲೆಯಲ್ಲಿ ಈ ಮಾತನ್ನು ಹೇಳಿದ್ದಾರೆ ಎಂದು ನನಗೆ ಅರ್ಥವಾಗುತ್ತಿಲ್ಲ. ಒಂದು ಸಾರಿ ಬಚಾವತ್ ಆಯೋಗದ ತೀರ್ಪನ್ನು ನಾವೆಲ್ಲಾ ಸೇರಿ ಒಪ್ಪಿಕೊಂಡಿದ್ದೇವೆ. ಮತ್ತೆಲ್ಲಿ ಕಮಿಟ್‌ಮೆಂಟ್ ಇಲ್ಲದೆ, ಕೃಷ್ಣಾ ಬೇಸಿನ್‌ನಲ್ಲಿ ನೀರಾವರಿ ಯೋಜನೆಗಳನ್ನು ಪೂರ್ಣವಾಗಿ ಮಾಡದೆ ನಾವು ಈ ದುಸ್ಥಿತಿಗೆ ಬಂದಿದ್ದೇವೆ. ಇದರಿಂದ ನಮ್ಮ ರಾಜ್ಯದ ರೈತರಿಗೆ ಬಹಳ ಅನ್ಯಾಯವಾಗಿದೆ. ಈ ಬಚಾವತ್ ತೀರ್ಪಿನ ಪ್ರಕಾರ, ಆಂಧ್ರ ಮತ್ತು ಮಹಾರಾಷ್ಟ್ರ ಸರ್ಕಾರದವರು ತಮ್ಮ ಪಾಲಿನ ನೀರನ್ನು ಸಂಪೂರ್ಣವಾಗಿ ಉಪಯೋಗ ಮಾಡಿಕೊಂಡಿದ್ದಾರೆ. ತಾವು ಅನ್ಯುಯಲ್ ಪ್ಲಾನ್ ಔಟ್‌ಲೇನಲ್ಲಿ 300 ಕೋಟಿ ರೂಪಾಯಿಯಿಂದ 600 ಕೋಟಿ ರೂಪಾಯಿಗಳು ಬೇಕಾಗುತ್ತದೆಂದು ಹೇಳಿದ್ದೀರಿ. ಈ ವರ್ಷ ಬೇರೆ ಎಲ್ಲಾ ಕೆಲಸಗಳನ್ನು ಬದಿಗೊತ್ತಿ 600 ಕೋಟಿ ಇದಕ್ಕೆ ಖರ್ಚು ಮಾಡುತ್ತೇನೆ, ನನ್ನಿಂದ ಈ ಕೆಲಸ ಪ್ರಾರಂಭವಾಗುತ್ತದೆಂಬ ತೀರ್ಮಾನ ತೆಗೆದುಕೊಂಡರೆ, ಖಂಡಿತ ಈ ಕೆಲಸ ಪ್ರಾರಂಭವಾಗುತ್ತದೆ. ಈ ರೀತಿಯಾದಂಥ ನಿರ್ದಿಷ್ಟವಾದ ಹೇಳಿಕೆಯನ್ನು ಕೊಟ್ಟಿದ್ದ ಹಿಂದಿನ ಲೋಕೋಪಯೋಗಿ ಸಚಿವರು ಬದಲಾವಣೆಯಾದರು. ನಮ್ಮ ಪುಣ್ಯ, ತಾವು ಮುಖ್ಯ ಮಂತ್ರಿಯಾಗಿ ಬಂದಿದ್ದೀರಿ. ತಾವು ಬೇರೆ ರಾಜ್ಯಗಳ ಮುಖ್ಯ ಮಂತ್ರಿಗಳ ಜೊತೆ ಮಾತುಕತೆ ನಡೆಸಿದರೆ ಈ ಸಮಸ್ಯೆ ಬಗೆಹರಿಯುವುದಿಲ್ಲ. ಮಹಾರಾಷ್ಟ್ರದ ಮುಖ್ಯ ಮಂತ್ರಿಗಳು ಇದನ್ನು ಈಗಾಗಲೇ ವಿರೋಧ ಮಾಡಿದ್ದಾರೆ. ಇದರ ಬಗ್ಗೆ ಅಲ್ಲಿಂಚ ವಿಧಾನಸಭೆಯಲ್ಲಿ ಈಗಾಗಲೇ ಚರ್ಚೆಯಾಗಿದೆ. ಆದ್ದರಿಂದ ಕೊನೆಯ ಪಕ್ಷ ಅನ್ಯುಯಲ್ ಪ್ಲಾನ್ ಔಟ್‌ಲೇನಲ್ಲಿ ಇದಕ್ಕೆ ಹೆಚ್ಚು ಖರ್ಚು ಮಾಡಬೇಕಾಗುತ್ತದೆ. ಇದರ ಬಗ್ಗೆ ಕಮಿಟ್‌ಮೆಂಟ್ ಇಲ್ಲವೇ? ಸರ್ಕಾರ ಈ ಯೋಜನೆಗೆ ಬೇಕಾಗುವಂಥ 600 ಕೋಟಿ ರೂಪಾಯಿಗಳನ್ನು ಅನ್ಯುಯಲ್ ಪ್ಲಾನ್ ಔಟ್‌ಲೇನಲ್ಲಿ ಒದಗಿಸಿ, ಇದಕ್ಕೆ ಬೇಕಾಗುವಂಥ ಎಲ್ಲಾ ಕಾರ್ಯಕ್ರಮಗಳನ್ನು ತುರ್ತಾಗಿ ಪ್ರಾರಂಭ ಮಾಡಲಾಗುತ್ತದೆ ಎಂಬ ಆಶ್ವಾಸನೆಯನ್ನು ರೈತರ ಪರವಾಗಿ ಕೊಡಬೇಕು. ಏಕೆಂದರೆ ಇದುವರೆಗೆ ಅಧಿಕಾರದಲ್ಲಿದ್ದ ಜನ ನಮ್ಮ ರೈತರಿಗೆ ಅನ್ಯಾಯ ಮಾಡಿದ್ದಾರೆ. ಇದರ ಬಗ್ಗೆ ಸ್ಪಷ್ಟವಾದ ಉತ್ತರವನ್ನು ಸನ್ಮಾನ್ಯ ಮುಖ್ಯ ಮಂತ್ರಿಗಳಿಂದ ನಾನು ಬಯಸುತ್ತೇನೆ.

ಶ್ರೀ ಎಸ್. ಬಂಗಾರಪ್ಪ :– ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರ ಈ ಒಂದು ಅಭಿಪ್ರಾಯವನ್ನು ನಾನು ಒಪ್ಪುತ್ತೇನೆ. ಮಹಾರಾಷ್ಟ್ರ ಹಾಗೂ ಕರ್ನಾಟಕ ರಾಜ್ಯಗಳು ಈ ಒಂದು ವಿಚಾರದಲ್ಲಿ ಒಂದು ಸದಭಿಪ್ರಾಯವನ್ನು ಹೊಂದಿವೆ, ಇಲ್ಲ ಎನ್ನುವ ಮಾತಿಲ್ಲ. ನಾವು ಈಗಾಗಲೇ ಬಚಾವತ್ ಆಯೋಗದ ವರ್ಧದಿಯ ಶಿಫಾರಸ್ಸುಗಳನ್ನು

ಒಪ್ಪಿರುವಂಥದ್ದು ನಿಜ. ಈಗ ನಮ್ಮ ಮುಂದಿರುವ ವಿಚಾರ ಏನೆಂದರೆ, ನಾವು ಎಷ್ಟು ಪ್ರಮಾಣದ ನೀರನ್ನು ಉಪಯೋಗಿಸಿಕೊಳ್ಳಬೇಕು ಮತ್ತು ಇದಕ್ಕೆ ಬೇಕಾಗುವ ಹಣವನ್ನು ಹೇಗೆ ಒದಗಿಸಿ ಉದ್ಯೋಗವನ್ನು ಮಾಡಬೇಕು ಎಂಬುದು. ಇದಕ್ಕೆ 300–600 ಕೋಟಿ ರೂಪಾಯಿಗಳ ಹಣ ಬೇಕಾಗಿದ್ದು, ಇವನ್ನು ಸ್ಟೀಲ್, ಬೆಗ್ ಆರ್ ಬಾರೊ ಎನ್ನುವ ಹಾಗೆ ಯಾವುದಾದರೊಂದು ವ್ಯವಸ್ಥೆ ಮಾಡಿ ಹಣವನ್ನು ಒದಗಿಸಬೇಕಾಗಿದೆ.

ಸಭಾಧ್ಯಕ್ಷರು :– ಸ್ಟೀಲ್ ಮಾಡಬೇಡಿ, ಬೆಗ್ ಅಥವಾ ಬಾರೊ ಮಾಡಿ ಒದಗಿಸಿ.

ಶ್ರೀ ಎಸ್. ಬಂಗಾರಪ್ಪ :– ಸ್ಟೀಲ್ ಕೂಡ ಒಂದು ಪೇಳೆ ಇದ್ದು ಬಿಟ್ಟಿರೆ ಒಳ್ಳೆಯದೆಂದು ಯೋಚನೆ ಮಾಡಿದೆ. ಬೆಗ್ ಮಾಡಿದರೂ ಸಹ ಬೆಗ್ಗಿಂಗ್ ಸರಿಯಲ್ಲ ಎಂಬ ಮಾತನ್ನು ಹೇಳಿದರಲ್ಲ ಎಂದು ಸ್ಟೀಲ್ ಸೇರಿಸಿದೆ. ಈ ಸಂದರ್ಭದಲ್ಲಿ ನಾವು ಹಣವನ್ನು ಜಾಸ್ತಿ ಒದಗಿಸಲೇಬೇಕು. ನಾವು ಅದಕ್ಕೆ ವಿಶ್ವ ಬ್ಯಾಂಕಿನ ಜೊತೆಗೆ ವ್ಯವಹಾರ ಮಾಡಿ ಜಾಸ್ತಿ ಹಣವನ್ನು ಪಡೆಯಲೇ ಬೇಕಾಗುತ್ತದೆ. ಅವರು ಕೆಲವು ಪೆಡ್ಯೂಲ್ ಕಾಸ್ಟ್‌ಕೊಂಡು ಬಿಟ್ಟಿದ್ದಾರೆ. ಅವರ ಕಂಡೀಷನ್ಸ್ ಎಲ್ಲಾ ಇದೆ; ಅದು ಏನೇ ಇರಲಿ, ಅದರ ಬಗ್ಗೆ ಸಂಪೂರ್ಣವಾದ ವಿವರವನ್ನು ಈ ಸಂದರ್ಭದಲ್ಲಿ ಕೊಡಲಿಕ್ಕೆ ಸಾಧ್ಯವಾಗುವುದಿಲ್ಲ ದಯಮಾಡಿ ಕ್ಷಮಿಸಬೇಕು. ನಾವು ಆ ಪ್ರಯತ್ನ ಮಾಡುತ್ತೇವೆ, ಹಣವನ್ನು ಜಾಸ್ತಿ ಇಡುತ್ತೇವೆ. ನಮಗೆ ಇರತಕ್ಕಂಥ ಪ್ಲಾನ್ ಸೈಜ್‌ನಲ್ಲಿ ಒಂದರಿಂದ ಹಣವನ್ನು ತೆಗೆದು ಇನ್ನೊಂದಕ್ಕೆ ರೀ ಅಲೊಕೆಟ್ ಮಾಡಿ ಇದಕ್ಕೆ ಹಾಕಿದರೆ ಬೇರೆಯದಕ್ಕೆ ಕಡಿಮೆಯಾಗಿದೆ ಎಂಬ ವಾದ ಈ ಶಾಸನ ಸಭೆಯಲ್ಲಿ ಬಂದುಬಿಡುತ್ತದೆ. ಪ್ರಗತಿಪರ ಯೋಜನೆಗಳನ್ನು ಬೇರೆ ಕಡೆ ನಿಲ್ಲಿಸಲಿಕ್ಕೆ ಬರುವುದಿಲ್ಲ. ಆದರೆ ಆದ್ಯತಾ ವಲಯದಲ್ಲಿ ಬರತಕ್ಕ ಪವರ್ ಜನರೇಷನ್, ಇರಿಗೇಷನ್, ಏನು ಇದೆ, ಇದಕ್ಕೆ ಆದ್ಯತೆ ಕೊಡುವುದನ್ನು ನಾವು ಒಪ್ಪಲೇಬೇಕು. ಅದಕ್ಕೆ ಮುಂದಿನ ಆರ್ಥಿಕ ವರ್ಷ ಪ್ರಾರಂಭವಾದಾಗ ಹೆಚ್ಚಿನ ಹಣವನ್ನು ಇಡತಕ್ಕ ಪ್ರಯತ್ನವನ್ನು ನಾವು ಸ್ಪಷ್ಟವಾಗಿ ಮಾಡುತ್ತೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ :– ಈಗ ಆಗಲೇ 6 ತಿಂಗಳು ಕಾಲ ಆಯಿತು., ಈಗ ಎಷ್ಟು ಖರ್ಚಾಗಿದೆ ಮತ್ತು ಮಾರ್ಚ್‌ಯೊಳಗೆ ಎಷ್ಟು ಹಣ ಖರ್ಚು ಮಾಡುತ್ತೀರಾ ಎಂದು ತಿಳಿಸಬೇಕು.

ಶ್ರೀ ಎಸ್. ಬಂಗಾರಪ್ಪ :– ಈಗ ತಾವು ಎಷ್ಟು ಖರ್ಚು ಮಾಡುತ್ತೀರಾ ಎನ್ನುವುದನ್ನು ತಿಳಿಸಬೇಕೆಂದು ಹೇಳುತ್ತಿದ್ದೀರಿ, ಈಗ ಇರತಕ್ಕಂಥ ಹಣವನ್ನು ಕಾಲದ ಪ್ರಕಾರ ಶೀರ್ಷವಾಗಿ ಖರ್ಚು ಮಾಡತಕ್ಕಂಥಾದ್ದಕ್ಕೆ ಕೆಲವು ಅಡೆತಡೆಗಳು ಕಾಣುತ್ತಿವೆ. ಈ ರೀತಿ ಕುಳಿತುಕೊಂಡು ಕೆಲಸ ಮಾಡಿದರೆ ಮುಗಿಸಲಿಕ್ಕೆ ಸಾಧ್ಯವಾಗುವುದಿಲ್ಲ ಎಂದು ಅನುಮಾನ. ಆದ್ದರಿಂದ ಸ್ಪೀಡ್ ಅಪ್ ಮಾಡಲಿಕ್ಕೆ ಏನು ಮಾಡಬೇಕೋ ಅದರ ಬಗ್ಗೆ ಅಧ್ಯಯನ ಮಾಡಿ, ಇರತಕ್ಕಂಥ ಹಣವನ್ನು ಜರೂರಾಗಿ ಸದುಪಯೋಗ ಪಡಿಸತಕ್ಕ ಕೆಲಸವನ್ನು ಮಾಡಬೇಕು, ಅದನ್ನು ನಾವು ಮಾಡುತ್ತೇವೆ.

ಡಾ. ಎಲ್. ಮಲಕರೆಡ್ಡಿ :– ಈ ಸರ್ಕಾರದ ನೀತಿ ಬಹಳ ವಿರೋಧಾಭಾಸವಾಗಿ ಕಾಣುತ್ತಿದೆ. ಈಗ ತಾವು ಒಂದೇ ದ್ವನಿಯಲ್ಲಿ ಹೇಳುತ್ತಿದ್ದೀರಿ, ಸಾಕಷ್ಟು ಹಣವನ್ನು ಅಂದರೆ 200–300 ಕೋಟಿ ರೂಪಾಯಿ ಒದಗಿಸಬೇಕು ಎಂದು ಹೇಳುತ್ತೀರಿ, ನೀವು ಕಳೆದ ಸಾರಿ ಒದಗಿಸಿದ ಹಣ 80 ಕೋಟಿ ರೂಪಾಯಿ, ಅದರಲ್ಲಿ ಖರ್ಚಾಗಿರುವುದು ಕೇವಲ 25 ಕೋಟಿ ರೂಪಾಯಿ. ಈಗ ಮಾರ್ಚ್ ಇನ್ನು ಮೂರು ತಿಂಗಳು ಇದೆ; ಅಷ್ಟರಲ್ಲಿ ಹಣ ಹೇಗೆ ಖರ್ಚು ಮಾಡುತ್ತೀರಾ? ಕೇವಲ ಉತ್ತರ ಕೊಡುವ ದೃಷ್ಟಿಯಿಂದ ಮಾತನಾಡುವುದು ಒಳ್ಳೆಯದಲ್ಲ. ಆದ್ದರಿಂದ, ಇದರ ಬಗ್ಗೆ, ತ್ವರಿತಗತಿಯಲ್ಲಿ ವಿಧಾನಸೌಧ ಮಟ್ಟದಲ್ಲಿ ಪ್ರತಿ ತಿಂಗಳು ಮಾನಿಟರಿ ಆಗತಕ್ಕದ್ದು ಇರಬೇಕು. ಮಾನಿಟರಿ ಆದರೆ ಕೆಲಸ ಯಾವತೀತಿ ನಡೆಯುತ್ತದೆಂದು ಗೊತ್ತಾಗುತ್ತದೆ. ಅದಕ್ಕೆ ವಾರ್‌ಫುಟಿಂಗ್‌ನಲ್ಲಿ ಈ ಕೆಲಸವನ್ನು ತೆಗೆದುಕೊಳ್ಳಬೇಕು. ಆದ್ದರಿಂದ ಇದರ ಬಗ್ಗೆ ನಿರ್ದಿಷ್ಟವಾದ ಉತ್ತರವನ್ನು ಕೊಡಬೇಕು.

ಶ್ರೀ ಎಸ್. ಬಂಗಾರಪ್ಪ :– ನಾನು ಮಾನ್ಯ ಸದಸ್ಯರ ಅಂಕಿಅಂಶಗಳನ್ನು ಒಪ್ಪುತ್ತೇನೆ. ಏಕೆಂದರೆ ಹಣ ಕೊಟ್ಟಿದ್ದು ಸಹ ಖರ್ಚಾಗಿಲ್ಲ ಎಂಬುದನ್ನು ಒಪ್ಪುತ್ತೇನೆ. ಅದಕ್ಕಾಗಿ ಹಣ ಖರ್ಚಾಗಬೇಕು, ಆದರ ಅರ್ಥ ಕೆಲಸಕಾರ್ಯ ಹೆಚ್ಚಾಗಿ, ಬೇಗವಾಗಿ ಕೆಲಸವನ್ನು ತೆಗೆದುಕೊಳ್ಳಬೇಕು. ಪ್ರಗತಿಯ ಬಗ್ಗೆ ನಾವು ಗಮನ ಕೊಡಬೇಕೆನ್ನುವುದನ್ನು ಒಪ್ಪುತ್ತೇನೆ. ಅದಕ್ಕೆ ನಾವು ಕಾರ್ಯಕ್ರಮ ಹಾಕುತ್ತೇವೆ. ಇನ್ನು ಮಾನ್ಯ ಯಡಿಯೂರಪ್ಪನವರು ಸೂಚಿಸಿದಂತೆ, ಅಂದರೆ, ನಾವು ಕೊಟ್ಟಿರತಕ್ಕ 80–100 ಕೋಟಿ ರೂಪಾಯಿಯಲ್ಲಿ ಈ ಕೆಲಸ ಮುಗಿಸಲಿಕ್ಕೆ

ಆಗುವುದಿಲ್ಲ ಎಂದು. ಅದನ್ನು ಒಪ್ಪಬೇಕಾಗುತ್ತದೆ, ನಾವು ಕೊಡಕ್ಕ ಹಣದ ಪ್ರಮಾಣ ನೋಡಿದರೆ ಈ ಶತಮಾನದ ಅಂತ್ಯಕ್ಕೆ ಮುಗಿಸಲಿಕ್ಕೆ ಸಾಧ್ಯವಾಗುವುದಿಲ್ಲ. ಈಗ ಇರಕ್ಕ ಹಣ ಖರ್ಚು ಮಾಡುವುದು ತಡವಾಗಿದೆ ಎಂದು ಒಂದು ಅಭಿಪ್ರಾಯವಾದರೆ, ಮತ್ತೊಂದು ಇದೇ ರೀತಿ ಆದರೆ ಶತಮಾನದ ಅಂತ್ಯಕ್ಕೆ ಮುಗಿಸಲಿಕ್ಕೆ ಆಗುವುದಿಲ್ಲ ಎಂದು ಒಂದು ಅಭಿಪ್ರಾಯವಿದೆ. ಈ ಎರಡಕ್ಕೂ ಕೂಡ ಗಮನ ಕೊಟ್ಟುಕೊಂಡು ಹೋಗಬೇಕಾಗುತ್ತದೆ. ಇದರ ಬಗ್ಗೆ ಹೊಸ ಅಪ್ರೋಚ್ ಹಾಕಿಕೊಳ್ಳದೇ ಇದ್ದರೆ, ಒಂದು ದೊಡ್ಡ ತೀರ್ಮಾನಕ್ಕೆ ಕೈ ಹಾಕದೇ ಇದ್ದರೆ ಇದನ್ನು ಮುಗಿಸಲಿಕ್ಕೆ ಸಾಧ್ಯವಾಗುವುದಿಲ್ಲ. ನಾವು ಒಂದು ಅನ್ಯಾಯಕ್ಕೊಳಗಾಗುತ್ತೇವ ಎನ್ನುತಕ್ಕ ಒಂದು ಅನಿಸಿಕೆ ನನ್ನಲೂ ಕೂಡ ಇದೆ.

ಶ್ರೀ ಬಿ.ಎಸ್. ಯಡಿಯೂರಪ್ಪ :– ಅಧ್ಯಕ್ಷರೆ, ಇದರ ಬಗ್ಗೆ ನಿಯಮ 68ರ ಪ್ರಕಾರ ಚರ್ಚೆ ಮಾಡಲಿಕ್ಕೆ ಅವಕಾಶ ಮಾಡಿಕೊಡಬೇಕು. ಏಕೆಂದರೆ, ಇದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಒಂದೂ ಸಹ ಸ್ಪಷ್ಟವಾದಂಥ ಉತ್ತರವನ್ನು ಕೊಡಲಿಲ್ಲ. ಈಗ ಕೊಟ್ಟಂಥ ದುಡ್ಡು ಖರ್ಚಾಗಿಲ್ಲ, ಬರುವ ಮುಂದಿನ ವರ್ಷದಲ್ಲಿ 300–400 ಕೋಟಿ ರೂಪಾಯಿಗಳ ಆಗತ್ಯ ಇದೆ. ಅಂದರೆ ಏನು ಮಾಡಬೇಕು? ಆದ್ದರಿಂದ, ಇದರ ಬಗ್ಗೆ ಚರ್ಚೆಗೆ ಅವಕಾಶ ಕೊಡಬೇಕು.

ಅಧ್ಯಕ್ಷರು :– ತಾವು ಬರೆದು ಕಳುಹಿಸಿಕೊಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ :– ಆಗಬಹುದು.

ಅಧ್ಯಕ್ಷರು :– ಡಾ : ನಂಜಪ್ಪ ಅವರು ಸಭೆಯಲ್ಲಿ ಇಲ್ಲ. ಈಗ 121(431) ನೇ ಪ್ರಶ್ನೆಯನ್ನು ಬಾಬಾಗೌಡ ಪಾಟೀಲ್ ಅವರ ಪರವಾಗಿ ಪ್ರೊ. ನಂಜುಂಡಸ್ವಾಮಿ ಅವರು ಕೇಳಬಹುದು.

ನೀರಾವರಿ ಪಂಪ್‌ಸೆಟ್‌ಗಳ ವಿದ್ಯುತ್ ಬಳಕೆಯ ಬಿಲ್ಲಿನ ಬಾಕಿ ಬಗ್ಗೆ

431 ಶ್ರೀ ಬಾಬಗೌಡ ಪಾಟೀಲ್ (ಕೆಂಪ್ಪೂರ್):– ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿಜಾಪುರ ಜಿಲ್ಲೆಯ ರೈತರು ಬರಗಾಲದ ನೀಮಿತ್ತ ತಮ್ಮ ನೀರಾವರಿ ಪಂಪ್‌ಸೆಟ್‌ಗಳ ವಿದ್ಯುತ್ ಬಿಲ್ಲನ್ನು ಪಾವತಿ ಮಾಡದೇ ಇರುವುದು ಸರ್ಕಾರಕ್ಕೆ ಗೊತ್ತಿದೆಯೆ?

ಆ) ಬರಗಾಲಕ್ಕೆ ಈಡಾಗಿರುವ ಈ ರೈತರುಗಳಿಂದ ಅವರ ಬಾವಿಗಳಲ್ಲಿ ನೀರಿಲ್ಲದ ಕಾರಣ ಪಂಪುಸೆಟ್‌ಗಳನ್ನು ಉಪಯೋಗಿಸದಿದ್ದರೂ ಸಹ ಬಲಾತ್ಕಾರವಾಗಿ ಅವರ ವಿದ್ಯುಚ್ಛಕ್ತಿ ಬಾಕಿಯನ್ನು ವಸೂಲಿ ಮಾಡುತ್ತಿರುವುದು ಸಮಂಜಸವೆ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು)

ಅ ಇಲ್ಲಾ.

ಬಿಜಾಪುರ ಜಿಲ್ಲೆಯಲ್ಲಿ ನೀರಾವರಿ ಪಂಪ್‌ಸೆಟ್ಟುಗಳ ಶೇಕಡಾ 50 ರಷ್ಟು ಗ್ರಾಹಕರು ತಮ್ಮ ವಿದ್ಯುಚ್ಛಕ್ತಿಯ ಬಿಲ್ಲಿನ ಹಣವನ್ನು ಈಗಾಗಲೇ ಪಾವತಿ ಮಾಡಿದ್ದಾರೆ.

ಆ) 10 ಅಶ್ವಶಕ್ತಿ ಸಾಮರ್ಥ್ಯದವರೆಗಿನ ನೀರಾವರಿ ಪಂಪುಸೆಟ್‌ಗಳಿಗೆ ಮೀಟರುಗಳನ್ನು ಅಳವಡಿಸುತ್ತಿಲ್ಲ ಮತ್ತು ಬಳಸುವ ವಿದ್ಯುತ್ತಿನ ಪ್ರಮಾಣಕ್ಕೆ ನಿರ್ಬಂಧವಿಹುವುದಿಲ್ಲ. ಅವರು ಬಳಸುವ ಪ್ರಮಾಣವು ಎಷ್ಟೇ ಇದ್ದಾಗ್ಯೂ ವಾರ್ಷಿಕ ಆಧಾರ್ಶದ ಮೇಲೆ ಪ್ರತಿ ಅಶ್ವ ಶಕ್ತಿಗೆ ನಿಗದಿತ ವಿದ್ಯುತ್ ದರವನ್ನು ಪಾವತಿ ಮಾಡಬೇಕಾಗಿರುತ್ತದೆ. 10 ಅಶ್ವ ಶಕ್ತಿಗಿಂತ ಹೆಚ್ಚಿನ ಸಾಮರ್ಥ್ಯದ ನೀರಾವರಿ ಪಂಪ್‌ಸೆಟ್ಟುಗಳಿಗೆ ಮೀಟರುಗಳನ್ನು ಅಳವಡಿಸಿದ್ದು ಅಂಥ ಗ್ರಾಹಕರು ವಿದ್ಯುಚ್ಛಕ್ತಿ ಬಳಕೆ ಆಧಾರದ ಮೇಲೆ ವಿದ್ಯುತ್ ದರವನ್ನು ನೀಡಬೇಕಾಗಿರುತ್ತದೆ. ಈ ಕಾರಣಕ್ಕಾಗಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ವಿದ್ಯುತ್ ಪೂರೈಕೆಯ ನಿಯಮಗಳು ವಿದ್ಯುತ್ ಬಿಲ್ಲಿನ ಹಣವನ್ನು ಮನ್ನಾ ಮಾಡಲು ಅನುಮತಿಸುವುದಿಲ್ಲ.